ನಾನು, ಅದಕ್ಕಾಗಿ ನಿಮ್ಮನ್ನು ನೀವು ಹಳಿದುಕೊಳ್ಳಬೇಕಾದ್ದು ಏನೂ ಇಲ್ಲ ಎಂದವನಿಗೆ ಭರವಸೆ ಕೊಟ್ಟೆ. ಪ್ರಪಂಚದ ಈ ಭಾಗವನ್ನು ಹಾದುಹೋಗುತ್ತಿದ್ದೀರಾ ಎಂದು ಕೇಳಿದೆ. ಅವನು ಇನ್ನು ಕೆಲವು ದಿನಗಳಲ್ಲಿ ತನ್ನ ದೇಶಕ್ಕೆ ಹಿಂತಿರುಗುವ ಯೋಚನೆಯಿದೆಯೆಂದು ಹೇಳಿದ. ಆಗಷ್ಟೇ ನನಗೆ ಆತ ಓರ್ಕ್ನೀ ದ್ವೀಪಗಳ ಒಬ್ಬ ಸ್ಕಾಟ್ ಎಂದು ಗೊತ್ತಾಯಿತು. ಸ್ಟೀವನ್‌ಸನ್‌ನನ್ನೂ ಹ್ಯೂಮ್‌ನನ್ನೂ ಮೆಚ್ಚಿಕೊಂಡಿರುವ ನನಗೆ ವೈಯಕ್ತಿಕವಾಗಿ ಸ್ಕಾಟ್‌ಲ್ಯಾಂಡ್ ಎಂದರೆ ವಿಶೇಷ ಪ್ರೀತಿ ಎಂದು ಹೇಳಿದೆ.

"ಸ್ಟೀವನ್‌ಸನ್ ಮತ್ತು ರಾಬಿ ಬರ್ನ್ಸ್ ಅಲ್ಲವೆ?" ಎಂದವನು ನನ್ನನ್ನು ತಿದ್ದಿದ.

ನಾವು ಮಾತಾಡುತ್ತಿರುವಾಗ ಆ ಅಪರಿಮಿತ ಪುಸ್ತಕವನ್ನು ಪರಿಶೀಲಿಸುತ್ತಲೇ ಇದ್ದೆ. ಒಂದು ಬಗೆಯ ಉದಾಸೀನತೆಯನ್ನು ತೋರಿಸಿಕೊಳ್ಳುತ್ತ, "ಈ ವಿಚಿತ್ರ ಪುಸ್ತಕವನ್ನು ಬ್ರಿಟಿಷ್ ಮ್ಯೂಸಿಯಮ್ಮಿಗೆ ಕೊಡಬೇಕೆಂದಿದ್ದೀರಾ?" ಎಂದು ಕೇಳಿದೆ.

"ಇಲ್ಲ, ನಿಮಗೆ ಕೊಡುತ್ತಿದ್ದೇನೆ" ಎಂದು ಹೇಳಿದ ಅವನು ತುಂಬ ದುಬಾರಿ ಎನ್ನಿಸುವಷ್ಟು ಬೆಲೆ ಹೇಳಿದ.

